(6ನೇ ಪುಟದಿಂದ)
ಫೋಟೋ ತೆಗೆಯುತ್ತೀರಿ ಎನ್ನುವುದೂ ಮುಖ್ಯ. ನೀವು ಫೋಕಸ್ ಮಾಡುವ ವಸ್ತು ವಿಭಿನ್ನವಾಗಿರಬೇಕು. ಅಥವಾ ಆ ಭಂಗಿಯೇ ವಿಭಿನ್ನವಾಗಿರಬೇಕು. ಇಲ್ಲವಾದಲ್ಲಿ ನಿಮ್ಮ ಫೋಟೋ ಹತ್ತರಲ್ಲಿ ಹನ್ನೊಂದಾಗುತ್ತದೆ. ಬೆಳಕು, ಫ್ರೇಮ್ ಎಲ್ಲವೂ ತಾಂತ್ರಿಕ ಅಂಶಗಳು. ಎಲ್ಲಕ್ಕಿಂತ ಮುಖ್ಯ ಫೋಟೋ ನೋಡಿದಾಗ ವೀಕ್ಷಕರ ಗಮನ ಕೇಂದ್ರೀಕರಿಸುವುದು. ಅದು ಸುಮ್ಮನೆ ಒಲಿಯುವ ಕಲೆಯಲ್ಲ. ಎಷ್ಟೋ ಸಲ ಅಂತಹ ಪ್ರಯತ್ನವೇ ಇಲ್ಲದೆ ಅತ್ಯುತ್ತಮ ಭಾವ- ಭಂಗಿಗಳು ಸಿಗುವುದುಂಟು. ಇನ್ನೆಷ್ಟೋ ಸಲ್ಲ ತಾಳ್ಮೆ, ಶ್ರದ್ಧೆಯಿಂದ ತೆಗೆದರೂ ಫೋಟೋ ಕೆಟ್ಟದಾಗಿ ಕಾಣಿಸುವುದುಂಟು. ಅಂದರೆ ಕ್ಲಿಕ್ಕಿಸುವ ಕ್ಷಣವೆಂದರೆ ಅದು ಅದ್ಭುತ ಕ್ಷಣ.

ಇಲ್ಲಿರುವ ಫೋಟೋಗಳಲ್ಲಿ ಹೀಗೆ ಆ ಕ್ಷಣದ ಸತ್ಯಕ್ಕೆ ಸಿಕ್ಕ ಫ್ರೇಮ್‌ಗಳಿವೆ. ಚಿಕ್ಕೋಡಿಯ ಬೆಳಕೂಡದಲ್ಲಿ ಸಿಕ್ಕ ಗಿಳಿಗಳ ಸಂಭಾಷಣೆಯ ದೃಶ್ಯ, ಕನ್ನಡಿಯಲ್ಲಿ ತನ್ನ ಬಿಂಬ ನೋಡಿಕೊಳ್ಳುತ್ತಿರುವ ಸನ್‌ಬರ್ಡ್, ಎಲ್ಲರಿಂದ ಹೊಗಳಿಸಿಕೊಳ್ಳುವ ಚಂದ್ರನ ಮುಖದ ಕುಳಿಗಳು, ಜೋಳದ ದಂಟಿನ ತುದಿಯಲ್ಲಿರುವ ತೆನೆಯ ಕಾಳುಗಳನ್ನು ಮೆಲ್ಲುತ್ತಿರುವ ಅಳಿಲು, ಗರಿಕೆಯ ಮುಂಜಾವಿನ ಮಂಜಿನ ಹನಿಗಳು ಸೃಷ್ಟಿಸಿರುವ ವಿಶಿಷ್ಟ ಲೋಕ, 10 ಸೆಂ.ಮೀ ಅಗಲದ ರೆಕ್ಕೆಗಳುಳ್ಳ ಅಪರೂಪದ ಚಿಟ್ಟೆ, ತಣ್ಣಗೆ ಕುಳಿತರೂ ವರ್ಣರಂಜಿತವಾಗಿ ಕಾಣುವ ಓತಿಕ್ಯಾತ- ಹೀಗೆ ಈ ಚಿತ್ರಗಳು ಉಕ್ಕಿಸುವ ಭಾವಗಳು ನೂರೆಂಟು. ಈ ಜಗತ್ತೇ ಒಂದು ವಿಸ್ಮಯ. ಅಲ್ಲಿನ ಅಪರೂಪದ ನೋಟಗಳು ಹೀಗೆ ಸ್ಥಾಯಿಯಾಗಿ ಉಳಿಯುವುದು ಇನ್ನೂ ವಿಸ್ಮಯ.



